ರಾತ್ರಿ ಮನೆಗೆ ಬಂದ ಅವ್ವ ಮಗನ ಮೇಲೆ ಅಪರಂಪಾರ ರೇಗಾಡುವ ಬದಲು ಮನೆಯೊಳಗಿನ ಯಾರೋ ಸದಸ್ಯರನ್ನು ಕಳೆದುಕೊಂಡಂತೆ ಮೌನವಾಗಿ ಕಣ್ಣೀರಿಟ್ಟಳು. ಯಾರಾದರೂ ನೆಂಟರು ಬಂದಿದ್ದರೆ ಅಟ್ಟಾಡಿಸಿ ಅದನ್ನು ಹಿಡಿದುಕೊಂಡು, ಅದರ ಕೊಕ್ಕನ್ನು ಅಗಲಿಸಿ ಎರಡು ಗುಟುಕು ನೀರನ್ನು ಬಿಟ್ಟು ಕೊಯ್ದು ಸಾರು ಮಾಡಿ ಮುದ್ದೆಯೊಂದಿಗೆ ಚಪ್ಪರಿಸಿ ಅನೇಕ ಸಲ ತಿಂದಿದ್ದರೂ ಈಗ ಮಾತ್ರ ಯಾಕೋ ಅದುಮಿಡಲಾರದ ದುಃಖದಿಂದ ಅವನೂ ಅತ್ತುಬಿಟ್ಟ. 'ಏನಾದರೂ ಬೈದುಬಿಡವ್ವ, ಈ ಮೌನವನ್ನು ನಾನು ತಾಳಲಾರೆ' ಎಂದು ಆರ್ದ್ರನಾದ. ಗಂಡ ಬರುವುದರೊಳಗೆ ಅದನ್ನು ಇಲಾಜು ಮಾಡಿಬಿಡಬೇಕು ಎಂಬ ಧಾವಂತದಲ್ಲಿ ತಿಪ್ಪೆಯಲ್ಲಿ ಗುಂಡಿ ತೆಗೆದು ಮುಚ್ಚಿಬಿಟ್ಟಳು. ಆ ಜಾಗವನ್ನು ಗುರುತು ಇಟ್ಟುಕೊಂಡು ಬೆಳಗ್ಗೆಗೆ ಸಗಣಿ ಬಾಚುವಾಗ ಅದರ ಮೇಲೆ ಮತ್ತೊಂದು ಮಂಕರಿ ಸಗಣಿ ಹಾಕಬೇಕು ಎಂದುಕೊಂಡಳು. ಅಪ್ಪ ಬರುವುದರೊಳಗೆ ಅದನ್ನು ಕೊಯ್ದು ಎಸರು ಮಾಡಿ ತಿನ್ನಬಹುದಾದ ಎಲ್ಲ ಸಾಧ್ಯತೆಗಳಿದ್ದರೂ ಅವ್ವ ಯಾಕೆ ಅದನ್ನು ಕೊಯ್ಯಲಿಲ್ಲ. ಅದು ಕಾವಿಗೆ ಕೂತ ಕೋಳಿಯಂತಲೋ, ಸತ್ತದ್ದನ್ನು ಕೊಯ್ದು ತಿನ್ನಬಾರದು ಅಂತಲೋ... ಅವನಿಗೆ ಉತ್ತರವೇ ಸಿಕ್ಕದೇ, ಈ ಅವ್ವಳೆಂಬುವಳೇ ಒಂದು ನಿಗೂಢ ಆಗರ ಎಂದೆನಿಸಿತ್ತು.

ಲಂಡನ್ನಿನಲ್ಲಿ ಫ್ಲೈಟ್ ಇಳಿಯತೊಡಗಿದಾಗ ಅವನ ಆಲೋಚನೆಯ ಲಹರಿಯೂ ರೆಕ್ಕೆ ಮುರಿದುಕೊಂಡು ಕುಂತಿತು. ಅರ್ಧ ಗಂಟೆಯೊಳಗೆ ಮತ್ತೆ ಮೇಲೇರಬೇಕಾಗಿದ್ದ ಫ್ಲೈಟ್, ಈಗಲೋ ಆಗಲೋ ಎನ್ನುತ್ತ – ಎಕ್ಸ್‌ಪ್ರೆಸ್ ರೈಲಿಗೆ ದಾರಿ ಕಾಯ್ದಿರಿಸಿಕೊಂಡು ಕಾದುನಿಂತಿರುತ್ತಿದ್ದ ಗೂಡ್ಸ್‌ಗಾಡಿಯಂತೆ – ಸುಮಾರು ಆರೇಳು ಗಂಟೆ ಕಾಲ ನಿಂತೇಬಿಟ್ಟಿತು. ಅವನ ಎದೆಬಡಿತ ಏರಿಳಿಯತೊಡಗಿತ್ತು. ಸಾವಿನ ಹಾದಿ ಸಾಗುವುದಿಲ್ಲ ಎಂಬ ಮಾತು ಎಷ್ಟೊಂದು ನಿಜ ಅಲ್ಲವೇ? ತಾನು ಬರುವವರೆಗೂ ಮಣ್ಣು ಮಾಡದೇ ಕಾದಿರುವ ತನ್ನ ಸಂಬಂಧಿಕರು, ತನಗಾಗಿ ಕಾದು ಕುಂತಿರುವ ಅವ್ವನ ಹೆಣ... ಕೊನೆಯದಾಗಿ ಅವ್ವನ ಮುಖವನ್ನೊಮ್ಮೆ ನೋಡಬೇಕು, ಕೆನ್ನೆ ಸವರಿ ಹಣೆಗೊಂದು ಮುತ್ತು ಕೊಟ್ಟು, ಗಳಗಳನೆ ಅತ್ತುಬಿಟ್ಟು, ವಿದಾಯ ಹೇಳಬೇಕು ಎಂದೇನೇನೋ ಕನಸುತ್ತಿದ್ದ.

★ ★ ★

ಅವ್ವ ಸತ್ತು ಆಗಲೇ ಮೂವತ್ತಾರು ಗಂಟೆಗಳೇ ಕಳೆಯುತ್ತ ಬಂದಿವೆ. ಹಳ್ಳಿಯ ತನ್ನ ಜನ ಅದನ್ನು ಹೇಗೆ ಸಂರಕ್ಷಿಸುತ್ತಿದ್ದಾರೆ ಎಂಬುದೇ ಅವನಿಗೆ ದೊಡ್ಡ ಪ್ರಶ್ನೆಯಾಗಿತ್ತು. ಅವನ ಮಾತು ನಿಜ. ಸತ್ತ ಹನ್ನೆರಡು ಗಂಟೆಯೊಳಗೆ ಮಣ್ಣು ಮಾಡಿಬಿಡುವುದಕ್ಕಂತಲೇ ಎಲ್ಲ ಸಿದ್ಧತೆ ಮಾಡಿಬಿಟ್ಟಿದ್ದರು. ಮಗನಿಗೆ ವಿಷಯ ತಿಳಿದು ಈಗ ಬರಬಹುದು, ಆಗ ಬರಬಹುದು ಎಂದು ಕಾದೇ ಕಾದಿದ್ದರು. ಆದರೆ ಅವನ ಫೋನು ಬರುವ ವೇಳೆಗಾಗಲೇ ಇಪ್ಪತ್ನಾಲ್ಕು ಗಂಟೆಗಳೇ ಕಳೆದುಹೋಗಿತ್ತು. ಇನ್ನೇನು ಬಂದು ಬಿಡುತ್ತೇನೆ ಎಂದು ತಿಳಿಸಿದ ಮೇಲೂ ಅವನಿಗೆ ಮುಖ ತೋರಿಸದೇ ಮಣ್ಣು ಮಾಡುವುದು ಹೇಗೆ?

ಅಕಸ್ಮಾತ್ತಾಗಿ ಉಸಿರು ಬಂದುಬಿಟ್ಟರೆ ಸುಲಭವಾಗಿ ತೆರೆಯುವಂತಿರಲಿ ಎಂದು ಮೂಗಿನ ಹೊಳ್ಳೆಗೆ ಇಟ್ಟಿದ್ದ ಹಗುರವಾದ ಹತ್ತಿ ಹಾಗೆಯೇ ಇತ್ತು. ಬಾಯಿಗೆ ಎಲೆ–ಅಡಿಕೆ ಕುಟ್ಟಿ ಹಾಕಿದ್ದರು. ಮಗ ಬರುವುದು ತಡವಾಗುತ್ತದೆ ಎಂದು ಹೆಂಗಸರೆಲ್ಲ ಸೇರಿ ಹೆಣಕ್ಕೆ ಸ್ನಾನ ಮಾಡಿಸಿ, ಆಕೆಯ ತವರು ಮನೆಯವರು ತಂದಿದ್ದ ಹೊಸ ಸೀರೆ ಉಡಿಸಿದ್ದರು. ಆಕೆಗೆ ಬಂಗಾರದ ಮೇಲೆ ಇದ್ದ ವ್ಯಾಮೋಹದಿಂದಾಗಿ ಮಣ್ಣು ಮಾಡಿದ ಮೇಲೂ ಹೆಣ ಕೊಳೆಯದಿದ್ದರೆ ಎಂಬ ಭಯದಿಂದ ಹನ್ನೆರಡು ಕಲ್ಲಿನ ಓಲೆಯಷ್ಟಗಲದ ಮೂಗುಬೊಟ್ಟನ್ನು ಹಾಗೆಯೇ ಬಿಟ್ಟು, ಬಂಗಾರದ ಕಾಸಿನ ಸರ, ಬೆಳ್ಳಿಯ ಡಾಬುಗಳಾದಿಯಾಗಿ ಎಲ್ಲವನ್ನೂ ಸೊಸೆ ಸುವರ್ಣ ಬಿಚ್ಚಿಟ್ಟುಕೊಂಡಿದ್ದಳು. ಮದುವೆಯಾದ ಲಾಗಾಯ್ತು ಬರೀ ಕಿತ್ತಾಟ, ರಂಪಾಟದಿಂದ ಮನೆಯೆಂಬುದನ್ನು ರಣರಂಗ ಮಾಡಿಕೊಂಡಿದ್ದರೂ